**ದಿನಾಂಕಃ 30.03.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು.**

**ಪಾಟೀಸವಾಲುಃ ಶ್ರೀ. ಇಮ್ರಾನ್ ಪಾಷ ವಕೀಲರಿಂದ ಎದುರುದಾರರ ಪರವಾಗಿಃ**

ನಾನು ಲಕ್ಕಿ ಟ್ರೇಡರ್ ಗೆ ಪಾರ್ಟನರ್ ಆಗಿದ್ದೇನೆ . ಅದರ ಪಾರ್ಟನರ್ ಶಿಪ್ ಡೀಡ್ ಹಾಜರುಪಡಿಸಿಲ್ಲ ಎಂದರೆ ಸರಿ. ಲಕ್ಕಿ ಟ್ರೇಡರ್ ನ ವಿಳಾಸ ನಂಬರ್ 465/1 ಅವಿನ್ಯೂ ರಸ್ತೆ ಬೆಂಗಳೂರು ಎಂದರೆ ಸರಿ. ಅದರ ಮಾಲೀಕರು ನಾಜೀಮಾ ಪರ್ವೀನ್ ಎಂದರೆ ಸರಿಯಲ್ಲ. ಅದರ ಹಿಂದೆ ಶಫೀಕ್ ಅಹಮ್ಮದ್ ರವರು ಮಾಲೀಕರು ಎಂದರೆ ಸರಿಯಲ್ಲ. ಅವರ ತಂದೆ ಅಬ್ದುಲ್ ರಹೀಮ್ ಮಾಲಿಕರಾಗಿದ್ದರು. ಅವರು 2011 ರಲ್ಲೆ ಮರಣ ಹೊಂದಿದ್ದಾರೆ. ಅವರ ಮರಣದ ನಂತರ ಶಫೀಕ್ ಅಹಮ್ಮದ್ ಬಾಡಿಗೆ ಪಡೆಯುತ್ತಿದ್ದರು. ಅವರು ಕೂಡ ಈಗ ಮರಣ ಹೊಂದಿದ್ದಾರೆ. ಅವರ ಮಕ್ಕಳು ಬಾಡಿಗೆಯನ್ನು ಪಡೆಯುತ್ತಿದ್ದರು. ಶಫೀಕ್ ಅಹಮ್ಮದ್‌ರವರ ಕುಟುಂಬದವರ ಪರಿಚಯ ನನಗೆ ಇದೆ ಎಂದರೆ ಸರಿಯಲ್ಲ ಮಕ್ಕಳ ಪರಿಚಯ ಮಾತ್ರ ಇದೆ. ನಾನು ಚೆಕ್ ಮತ್ತು ನಗದಾಗಿ ನಾಜೀಮಾ ಪರ್ವೀನ್ ರವರಿಗೆ ಬಾಡಿಗೆ ನೀಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ನಗದಾಗಿ ಶಫೀಕ್ ಅಹಮ್ಮದ್ ರವರ ಮಕ್ಕಳಿಗೆ ಬಾಡಿಗೆ ನೀಡುತ್ತಿದ್ದೆ.

2. ನಾನು ದಿನಾಂಕ.28.06.2014 ರಂದು 90 ಸಾವಿರ ರೂಗಳನ್ನು , ದಿನಾಂಕಃ 27.10.2014 ರಂದು 20 ಸಾವಿರ ರೂಗಳ ಚೆಕ್, ಅಮಾನ್ಯಗೂಂಡಿರುತ್ತದೆ ಮತ್ತು ದಿನಾಂಕಃ 11.11.2014 ರಂದು 30 ಸಾವಿರ ರೂಗಳನ್ನು ಹಾಗೂ ದಿನಾಂಕಃ23.12.2014 ರಂದು 10 ಸಾವಿರ ರೂ ಗಳನ್ನು ನಾಜೀಮಾ ಪರ್ವೀನ್‌ರವರಿಗೆ ನೀಡಿದ್ದೇನೆ ಎಂದರೆ ಅವರ ಮಕ್ಕಳಿಗೆ ನೀಡಿದ್ದೇನೆ . ಅದರಲ್ಲಿ ನಾನು 1 ಲಕ್ಷದ 10 ಸಾವಿರ ರೂಗಳನ್ನು ಸಾಲವಾಗಿ ನಾಜೀಮಾ ಪರ್ವೀನ್‌ರವರ ಮಕ್ಕಳಿಗೆ ಖಾಲಿ ಚೆಕ್ಕನ್ನು ನೀಡಿದ್ದೇನೆ. ತುರ್ತು ಪರಿಸ್ಥಿತಿ ಎಂದು ನನ್ನ ಬಳಿ ಹಣ ಪಡೆದಿದ್ದು ಅದರ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಬಾಡಿಗೆ ಮೊದಲು 3500 ರೂಗಳಿಂದ ಪ್ರಾರಂಭಸಿದ್ದು, ಕಡೆಯದಾಗಿ 10,000 ರೂಗಳನ್ನು ನೀಡುತ್ತಿದ್ದೆ ಈಗ ಮುಂದುವರೆದು 350 ರೂಗಳಿಂದ ಬಾಡಿಗೆ ಪ್ರಾರಂಭವಾಗಿತ್ತು ಎಂದು ತಿಳಿಸುತ್ತೇನೆ. ನಾನು ನೀಡಿರುವುದು ಬಾಡಿಗೆ ಹಣವಾಗಿದ್ದು, ಸಾಲವಾಗಿ ಯಾವುದೇ ಹಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

3. ಸಮನ್ಸ್ ನಲ್ಲಿ ಸೂಚಿಸಿರುವ ವಿಳಾಸ ನನ್ನದೇ ಆಗಿರುತ್ತದೆ ಎಂದರೆ ಸರಿ ಆದರೆ , ಸದರಿ ಸಮನ್ಸ್ ನನಗೆ ತಲುಪಿರುವುದಿಲ್ಲ. ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದೆ.ನಮ್ಮ ಅಂಗಡಿಯಲ್ಲಿ ಕೆಲಸಗಾರರು ಇದ್ದರು. ಸದರಿ ಸಮನ್ಸ್ ಅನ್ನು ನಮ್ಮ ಕೆಲಸಗಾರಿಗೆ ನೀಡಿ, ಅವರ ಸಹಿ ಮತ್ತು ನಮ್ಮ ಅಂಗಡಿಯ ಸೀಲನ್ನು ಪಡೆಯಲಾಗಿದೆ ಎಂದರೆ ನಮ್ಮ ಕೆಲಸಗಾರರು ಆ ರೀತಿ ಸಹಿ ಮಾಡುವುದಿಲ್ಲ ಮತ್ತು ಸದರಿ ಸೀಲು ನಮ್ಮ ಅಂಗಡಿಗೆ ಸಂಬಂಧಿಸಿರುವುದಿಲ್ಲ. ಸದರಿ ಸಹಿ ನಮ್ಮ ಕೆಲಸಗಾರರರಿಗೆ ಸಂಬಂಧಿಸಿದ್ದರೂ ಮತ್ತು ಸೀಲು ನಮ್ಮ ಅಂಗಡಿಯದೇ ಆಗಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಅಂಗಡಿಯ ಕೆಲಸಗಾರರ ಹೆಸರು ಮತ್ತು ಹಾಜರಾತಿ ಇರುವ ಪುಸ್ತಕವನ್ನು ನಾವು ಇಟ್ಟುಕೊಂಡಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸಮನ್ಸ್ ಯಾರು ಪಡೆದಿದ್ದಾರೆ ಎಂದು ತಿಳಿಯುತ್ತದೆ ಎನ್ನುವ ಕಾರಣಕ್ಕಾಗಿ ನಾನು ಸದರಿ ಹಾಜರಾತಿ ಪುಸ್ತಕವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

4. ನಂಬರ್ 465/1 ಅವಿನ್ಯೂ ರೋಡ್ ?ಎಂದು ಪೋಸ್ಟ್ ಕಳುಹಿಸಿದರೆ ನಮ್ಮ ಅಂಗಡಿಗೆ ತಲುಪುತ್ತದೆ ಎಂದರೆ ಸರಿ. ಅದನ್ನು ನಮಗೆ ತಂದುಕೊಟ್ಟರೆ ಮಾತ್ರ ನಮಗೆ ತಲುಪುತ್ತದೆ.ಎಸ್ ಸಿ 15023/2019 ರಲ್ಲಿ ನ್ಯಾಯಾಲಯದ ಮೂಲಕ ಮತ್ತು ಆರ್ ಪಿ ಎಡಿ ಮೂಲಕ ಸಮನ್ಸ್ ಕಳುಹಿಸಲಾಗಿರುತ್ತದೆ ಎಂದರೆ ನನಗೆ ಯಾವುದೆ ಸಮನ್ಸ್ ತಲುಪಿಲ್ಲ. ನ್ಯಾಯಾಲಯದ ಮೂಲಕ ಕಳುಹಿಸಿದ ಸಮನ್ಸ್ ನನಗೆ ತಲುಪಿದ್ದು, ಆರ್ ಪಿ ಎ ಡಿ ಮೂಲಕ ಕಳುಹಿಸಿದ ಸಮನ್ಸ ಅಲ್ಲಿ ಮಾಹಿತಿ ನೀಡಲಾಗಿದೆ ಎಂದು ಹಿಂಬರಹ ಬಂದಿದೆ ಎಂದರೆ ಸರಿಯಲ್ಲ. ನನಗೆ ಮಾಹಿತಿ ತಲುಪಿದರೂ ನಾನು ಅಂಚೆ ಕಛೇರಿಯಲ್ಲಿ ಅದನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ.ಈಗ ನನಗೆ ತೋರಿಸಿದ ನೋಟೀಸಿನ ಪ್ರತಿಯಲ್ಲಿ ತಿಳಿಸಿರುವ ವಿಳಾಸ ನನ್ನದೇ ಆಗಿರುತ್ತದೆ ಎಂದರೆ ಸರಿ. ಆದರೆ ಸದರಿ ನೋಟೀಸ್ ನನಗೆ ತಲುಪಿಲ್ಲ. ಅದನ್ನು ನಿ.ಆರ್ 1 ಎಂದು ಗುರುತಿಸಲಾಯಿತು. ಅದಕ್ಕೆ ಸಂಬಂಧಿಸಿದ ಹಿಂತಿರುಗಿದ ಅಂಚೆ ಲಕೋಟೆಯಲ್ಲಿ ಇರುವ ವಿಳಾಸ ನನ್ನದೇ ಆಗಿದ್ದು , ಅದರ ದೃಢಿಕೃತ ನಕಲನ್ನು ನಿ.ಆರ್ 2 ಎಂದು ಗುರುತಿಸಲಾಯಿತು. ಇದೇ ವಿಳಾಸಕ್ಕೆ ಪೋಲೀಸರ ಮೂಲಕ ಡೆಲಿವರಿ ವಾರೆಂಟ್ ನೀಡಲಾಗಿತ್ತು ಎಂದರೆ ನನಗೆ ಸದರಿ ವಾರೆಂಟ್ ತಲುಪಿರುವುದಿಲ್ಲ.

5. ಡೆಲಿವರಿ ವಾರೆಂಟ್ ನಮಗೆ ನೀಡಿದ ದಿನ ನಾನು, ಸಹೋದರ ಮತ್ತು ಕೆಲಸದವರು ಸೇರಿ ಅಂಗಡಿಯಲ್ಲಿದ್ದಂತಹ ಎಲ್ಲಾ ವಸ್ತುಗಳನ್ನು ಆಟೋ ಮೂಲಕ ಬೇರೆ ಕಡೆಗೆ ವರ್ಗಾಯಿಸಿರುತ್ತೇವೆ ಎಂದರೆ ಸರಿಯಲ್ಲ. ಅರ್ಧ ವಸ್ತುಗಳನ್ನು ಮಾತ್ರ ತೆಗೆದುಕೊಂಡು ಹೋಗಿದ್ದು ಉಳಿದಂತಹ ಅರ್ಧ ವಸ್ತುಗಳು ಅಲ್ಲಿಂದಲೇ ಹೋಗಿರುತ್ತದೆ. ಈಗ ನನಗೆ ತೋರಿಸಿದ ಪೊಟೋಗಳ ದೃಡಿಕೃತ ನಕಲುಗಳನ್ನು ತೋರಿಸಿದ್ದು ಅದರಲ್ಲಿ ನಾನು ಹೊಗುತ್ತಿರುವ ವಸ್ತುಗಳು ಮತ್ತು ಅಂಗಡಿಯೂ ನನಗೆ ಸೇರಿದ್ದು ಎಂದರೆ ಸರಿ. ಸದರಿ 27 ಪೋಟೋಗಳ ದೃಢಿಕೃತ ನಕಲುಗಳನ್ನು ನಿ.ಆರ್ 3 ಎಂದು ಗುರುತಿಸಲಾಯಿತು. ಇಪಿ ಸಂಖ್ಯೆ 15095/19 ಇದರಲ್ಲಿ ನನ್ನ ಹೇಳಿಕೆಗಳನ್ನು ನಾನು ಒಪ್ಪಿಕೊಂಡ ಕಾರಣ ಅದನ್ನು ಒಟ್ಟಾಗಿ ನಿಆರ್ .4 ಎಂದು ಗುರುತಿಸಲಾಯಿತು. ಎರಡೂ ಪ್ರಮಾಣ ಪತ್ರಗಳಲ್ಲಿ ಅಂದರೆ, ಇ.ಪಿ ಯಲ್ಲಿ ಮತ್ತು ಈ ಪ್ರಕರಣದಲ್ಲಿ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಮಾಹಿತಿ ಒಂದೇ ಇದೆ ಎಂದರೆ ಸರಿ. ಇ.ಪಿ ಅಲ್ಲಿ ಸಲ್ಲಿಸಿದಂತಹ ಅರ್ಜಿಯು ವಜಾ ಆಗಿತ್ತು ಎಂದರೆ ಸರಿ.

6. ಸದರಿ ಸ್ವತ್ತಿನಲ್ಲಿ ಈಗ ಬೇರೆಯವರು ವ್ಯವಹಾರ ಮಾಡುತ್ತಿದ್ದಾರೋ ಇಲ್ಲವೋ ಅಥವಾ ಖಾಲಿ ಇದೆಯೇ ಎಂದು ನನಗೆ ಮಾಹಿತಿ ಇಲ್ಲ. ಈಗ ಅನ್ವರ್ ಪಾಷ ಎನ್ನುವವರು ಸದರಿ ಅಂಗಡಿಯಲ್ಲಿ ಬ್ಯಾಗ್ ವ್ಯವಹಾರ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅನ್ವರ್ ಪಾಷ ರವರು ನಾಜೀಮಾ ಪರ್ವೀನ್‌ರವರ ವಿರುದ್ಧ ಒಂದು ತಡೆಯಾಜ್ಞೆ ಕೋರಿ ದಾವಾ ಸಲ್ಲಿಸಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ದಾವೆಯನ್ನು ರಾಜಿ ಮಾಡಿಕೊಂಡು ಡಿಕ್ರಿ ಮಾಡಿಕೊಂಡಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ.

7. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.ನಾನು ಉದ್ದೇಶ ಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನೀಡಿದ ಮುಂಗಡ ಹಣವನ್ನು ಹಿಂತಿರುಗಿಸಿದರೆ ನನಗೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಮುಂಗಡ ಹಣ ಪಾವತಿಸಿದ್ದೇನೆ ಎಂದು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ನನ್ನ ತಂದೆ ಮುಂಗಡ ಹಣ ನೀಡಿದ್ದರ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ನನ್ನ ತಂದೆ ಯಾವುದೇ ಮುಂಗಡ ಹಣ ಪಾವತಿಸಿಲ್ಲ ಮತ್ತು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಡಿ ಎಚ್ ಆರ್ ರವರು ನನಗೆ ಯಾವುದೇ ಬಾಕಿ ನೀಡಲು ಬಾದ್ಯರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿ, ಓದಿ ಹೇಳಿ ನಂತರ ಸಹಿ ಪಡೆಯಲಾಯಿತು).

ಓ ಹೇ ಕೇ ಸ ಇದೆ.

5 ನೇ ಅಪರ ನ್ಯಾಯಾಧೀಶರು,
ಲಘು ವ್ಯವಹಾರಗಳ ನ್ಯಾಯಾಲಯ,
24 ನೇ ಎಸಿಎಂಎಂ ಮತ್ತು ಸದಸ್ಯರು ಎಂಎಸಿಟಿ.